ಕುರುಕ್ಷೇತ್ರ ಯುದ್ಧ ಮುಗಿದು ಒಂದೆರಡು ದಿನಗಳಾಗಿವೆ. ದ್ರೌಪದಿ ತನ್ನ ನೀಳ ಕೇಶರಾಶಿಯನ್ನು ಹರಡಿಕೊಂಡು ಸ್ನಾನಗೃಹದಲ್ಲಿ ಚಂದ್ರಿಕೆಯ ನಿರೀಕ್ಷೆಯಲ್ಲಿದ್ದಳು. ಮೈ ಮನಸ್ಸುಗಳು ಬಹಳಷ್ಟು ದಣಿದಿದ್ದವು. ಪಡೆದುಕೊಂಡಿರುವುದು ಒಂದಿಷ್ಟಾದರೆ ಕಳೆದುಕೊಂಡುದೇ ಹೆಚ್ಚು. ಹಿರಿಯರು, ಅನುಭವಿಗಳು, ತಮ್ಮ ಮಾರ್ಗದರ್ಶಕರು, ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು, ಕೆಲವು ದಿನಗಳ ಹಿಂದೆ ಇದ್ದವರು ಈಗಿಲ್ಲ. ಮನಸ್ಸು ಈ ಹೊಯ್ದಾಟದಲ್ಲಿದ್ದಾಗಲೇ ಅವಳ ವಸ್ತ್ರವಿನ್ಯಾಸಕಿ ಹಾಗೂ ಆಪ್ತ ದಾಸಿ ಚಂದ್ರಿಕೆ ಲಗುಬಗೆಯಿಂದ ಧಾವಿಸಿದಳು. ದಾಸಿ ಎನ್ನುವುದಕ್ಕಿಂತಲೂ ಅವಳ ಅಂತರಂಗದ ಸಖಿ ಎಂದರೆ ತಪ್ಪಾಗಲಾರದೇನೋ. ಅವಳ ದಣಿದ ಮನಸ್ಸು ಮೈಗಳಿಗೆ ಪ್ರಾಣಸಿಂಚನವನ್ನು ನೀಡುವವಳು ಅವಳೇ. ಎಣ್ಣೆ ಹಾಕಿ ತೀಡಿದರೆ ಆ ಬೆರಳುಗಳಲ್ಲಿ ಅದೇನು ಮಾಂತ್ರಿಕತೆಯೋ ದೇಹದಲ್ಲಿನ ನೋವು ಸೋತು ಶರಣಾಗಿ ಹೋಗುವುದು. ಮೇಲೆ ಹದವಾದ ಬಿಸಿ ನೀರು ಬಿದ್ದೊಡನೆ ಹೊಸ ಚೈತನ್ಯ ತುಂಬಿ ಬರುವುದು.

‘ಎಷ್ಟು ಹೊತ್ತು ಕಾಯಿಸುತ್ತೀಯೇ ಚಂದ್ರಿ. ನೀನು ನನಗಾಗಿ ಕಾಯಬೇಕು. ಇಲ್ಲಿ ನಾನೇ ನಿನಗಾಗಿ ಕಾಯಬೇಕಿದೆ’. ದ್ರೌಪದಿಯ ಹುಸಿಮುನಿಸು ಚಂದ್ರಿಕೆಗೆ ಹೊಸದೇನಲ್ಲ.

‘ಅಮ್ಮ, ನಿಮ್ಮ ಸ್ನಾನಕ್ಕೆ ಬೇಕಾದ ವಸ್ತುಗಳನ್ನೆಲ್ಲಾ ತರಲು ಸ್ವಲ್ಪ ಸಮಯ ತಗುಲಿತು. ಆದರೂ ಅರ್ಜುನ ಮಹಾರಾಜರ ಪ್ರಿಯವಾದ ಮಲ್ಲಿಗೆಯ ಸುಗಂಧ ದ್ರವ್ಯ ತರುವುದು ಮರೆತೇಹೋಯಿತು. ನನಗೆ ಗೊತ್ತು, ಎಷ್ಟೋ ದಿನಗಳಿಂದ ನಿಮ್ಮ ಮೈ ಮನಸ್ಸುಗಳು ನಿಮ್ಮ ಪ್ರಿಯ ಅರ್ಜುನರ ಬರುವಿಗಾಗಿ ತವಕಿಸುತ್ತಿವೆ... ಅದಕ್ಕೆ ಇಷ್ಟು ಅವಸರಿಸುತ್ತಿದ್ದೀರಿ.’

‘ಛೀ ಹೋಗೇ... ನಿನ್ನ ಯೋಚನೆ ಯಾವಾಗಲೂ ಒಂದೇ. ಕೂದಲಲ್ಲಿ ಈ ನೆತ್ತರಿನ ವಾಸನೆಗೆ ತಲೆ ಸಿಡಿದು ಹೋಗುತ್ತಿದೆ. ಮತ್ತೇ ಈ ಸಿಕ್ಕು...’

ದುಶ್ಶಾಸನ, ದುರ್ಯೋಧನರ ನೆತ್ತರಿನ ವಾಸನೆ ಅವರು ಸತ್ತ ನಂತರವೂ ದ್ರೌಪದಿಯ ತಲೆಯೊಳಗೆ ಕೋಲಾಹಲವೆಬ್ಬಿಸಿದೆ. ಅದೆಷ್ಟು ಸುಗಂಧ ದ್ರವ್ಯಗಳನ್ನು ಸಿಂಪಡಿಸಿದಳೋ ಚಂದ್ರಿಕೆ, ಆದರೂ ಆ ದರಿದ್ರ ವಾಸನೆಯಿಂದಾಗಿ ಅವಳ ತಲೆ ಸಿಡಿಯುತ್ತಿತ್ತು. ಚಂದ್ರಿಕಾ ಜಾಣೆ. ತನ್ನ ಮಾತುಗಳಿಂದ ಒಡತಿಯ ಮನಸ್ಸನ್ನು ಬೇರೆಡೆ

